UASB Library
Newspaper Clippings
Friday 15-07-2022 Pg .1
Jai Kisan

ನೈಸರ್ಗಿಕ ಕೃಷಿ ಮಾದರಿ ಜಾರಿಗೊಳಿಸಿ

ಕೃಷಿ ಮತ್ತು ತೋಟಗಾರಿಕಾ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್

ನ **ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಭೂಮಿಯ ಫಲವತ್ತತೆ ಹೆಚ್ಚಿಸುವ ದೃಷ್ಟಿಯಿಂದ ನೈಸರ್ಗಿಕ ಕೃಷಿಯನ್ನು ಅಭಿಯಾನದ ಮಾದರಿಯಲ್ಲಿ ಜಾರಿಗೊಳಿಸುವಂತೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ರಾಜ್ಯಗಳಿಗೆ ಸಲಹೆ ನೀಡಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಕೃಷಿ ಮತ್ತು ತೋಟಗಾರಿಕಾ ಸಚಿವರ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ನೈಸರ್ಗಿಕ ಕೃಷಿಯನ್ನು ಪ್ರೋತ್ಸಾಹಿಸಲು ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು ನೈಸರ್ಗಿಕ ಕೃಷಿ ಮಿಷನ್ ಆರಂಭಿಸಿದ್ದು, ಆ ಮೂಲಕ ಕೇಂದ್ರದಿಂದಲೂ ನೆರವು ಒದಗಿಸಲಾಗುತ್ತಿದೆ. ಇದರಿಂದ ಮಣ್ಣು ಶುದ್ಧಗೊಳ್ಳುವುದರ ಜತೆಗೆ ಉತ್ಪಾದಕತೆಯೂ ಹೆಚ್ಚುತ್ತದೆ. ಅಲ್ಲದೆ, ರಾಸಾಯನಿಕ ಮುಕ್ತ ಆಹಾರ ಉತ್ಪನ್ನಗಳು ಲಭ್ಯವಾಗುತ್ತವೆ. ಹೀಗಾಗಿ ಈ ಕೃಷಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದರು.

ಕೃಷಿಯಲ್ಲಿ ತಂತ್ರಜ್ಞಾನ, ಜೈವಿಕ ರಸಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕಾಗಿದೆ ಎಂದ ಸಚಿವರು, ದೇಶದಲ್ಲಿ ಕೃಷಿ ಸಂವೇದನಾ ಶೀಲವಾಗಿದ್ದು, ಬಡ ಕೃಷಿಕರನ್ನು ಜೋಡಿಸುವುದು ಆಡಳಿತಯಂತ್ರದ ಜವಾಬ್ದಾರಿಯಾಗಿದೆ. ಗ್ರಾಮೀಣ ಭಾಗದಲ್ಲಿರುವ ರೈತರಿಗೆ ಕೇಂದ್ರ ಮತ್ತು ರಾಜ್ಯದ ಯೋಜನೆಗಳನ್ನು ತಲುಪಿಸುವ ಜವಾಬ್ದಾರಿಯನ್ನು ನಾವು ಮಹಿಸಿಕೊಳ್ಳಬೇಕಾಗಿದೆ. ಆ ಮೂಲಕ ವೈವಿದ್ಯಮಯ ಕೃಷಿಯನ್ನು ದೇಶ ಮತ್ತು ರಾಜ್ಯದ ಹಿತಕ್ಕೆ ಬಳಸಿಕೊಳ್ಳಲು ಮುಂದಾಗಬೇಕಿದೆ ಎಂದು ಹೇಳಿದರು.



ಎರಡು ದಿನಗಳ ಕೃಷಿ ಮತ್ತು ತೋಟಗಾರಿಕಾ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ರೈತ ಉತ್ಪಾದಕ ಸಂಘಗಳಿಗೆ ಕೇಂದ್ರದ ಅನುದಾನವನ್ನು ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಡಿಬಿಟಿ ಮೂಲಕ ವರ್ಗಾವಣೆ ಮಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಮನ್ಸುಖ್ ಮಾಂಡವೀಯ,ಶೋಭಾ ಕರಂದ್ಲಾಜೆ, ಕೈಲಾಶ್ ಚೌದರಿ, ಭಗವಂತ ಖೂಬಾ ಇದ್ದರು.

ಪ್ರಧಾನಿ ನರೇಂದ್ರ ಮೋದಿ ಅವರ ಇಚ್ಛಾಶಕ್ತಿ ಮತ್ತು ಪ್ರೋತ್ಸಾಹದಿಂದ ಇಫ್ಕೋ ಸಂಸ್ಥೆ ನ್ಯಾನೋ ಯೂರಿಯಾ ಸಂಶೋಧಿಸಿದ್ದು, ಇದರ ಪೇಟೆ ಸಬ್ಸಡಿ ಮೂಲಕ ದೊರೆಯುವ ಸಾಮಾನ್ಯ ಯೂರಿಯಾಗಿಂತಲೂ ಕಡಿಮೆಯಾಗಿದೆ. ಈ ಬಗ್ಗೆಯೂ ರಾಜ್ಯಗಳು ಗಮನಹರಿಸಬೇಕು ಎಂದರು.

ಕೃಷಿ ಕ್ಷೇತ್ರದ ಡಿಜಿಟಲೀಕರಣದಿಂದ ಆಗಿರುವ ಪ್ರಯೋಜನಗಳನ್ನು ಉದಾಹರಣೆಗಳ ಸಹಿತ ವಿವರಿಸಿದ ಅವರು, ಕರ್ನಾಟಕ, ತೆಲಂಗಾಣ ಸೇರಿದಂತೆ ಕೆಲವು ರಾಜ್ಯಗಳು ಇದರಿಂದ ಹೆಚ್ಚು ಅನುಕೂಲ ಪಡೆದಿರುವುದಾಗಿ ಹೇಳಿದರು. ಎಲ್ಲಾ ರಾಜ್ಯಗಳೂ ಇದನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

- ಕೃಷಿಯಲ್ಲಿ ತಂತ್ರಜ್ಞಾನ, ಜೈವಿಕ ಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕು
- ನ್ಯಾನೋ ಯೂರಿಯಾ ಬಳಸಲು ರೈತರನ್ನು ಪ್ರೋತ್ಸಾಹಿಸಬೇಕು
- ಕೃಷಿ ಡಿಜಿಟಲೀಕರಣದ ಅನುಕೂಲವನ್ನು ಎಲ್ಲಾ ರಾಜ್ಯಗಳೂ ಪಡೆಯಬೇಕು

ರೈತ ಕೇಂದ್ರಿತ ನೀತಿ ಅಗತ್ಯ- ಸಿಎಂ ಬೊಮ್ಮಾಯಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ದೇಶದ ಆರ್ಥಿಕತೆಯ ಎಂಜಿನ್ ನಡೆಯುತ್ತಿರುವುದೇ ಕೃಷಿಯಿಂದಾಗಿ. ಈ ಹಿನ್ನೆಲೆಯಲ್ಲಿ ಕೃಷಿ ಕ್ಷೇತ್ರದ ಪ್ರಗತಿಯಲ್ಲಿ ಇನ್ನೂ ಹೆಚ್ಚು ಆಳಕ್ಕೆ ಹೋಗಬೇಕಾದ ಅಹತ್ಯವಿದೆ. ಏಕೆಂದರೆ ರೈತರು ಕೃಷಿ ತೊರೆದರೆ ದೇಶದ ಜನರು ಸಾಯಬೇಕಾಗುತ್ತದೆ. ಆದ್ದರಿಂದ ರೈತ ಕೇಂದ್ರಿತ ನೀತಿಗಳನ್ನು ರೂಪಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಈ ನಿಟ್ಟಿನಲ್ಲಿ ಕೃಷಿ ಮತ್ತು ಭೂದಾಖಲೆಗಳ ಡಿಜಿಟಲೀಕರಣ, ಹೊಸ ತಂತ್ರಜ್ಞಾನದ ಅಳವಡಿಕೆಗೆ ರಾಜ್ಯ ಸರಕಾರ ಆದ್ಯತೆ ನೀಡಿದೆ. ಪಾರಂಪರಿಕ ಕೃಷಿಯ ಜತೆಗೆ ಆಧುನಿಕ ಕೃಷಿಯನ್ನೂ ಪ್ರೋತ್ಸಾಹಿಸುತ್ತಿದೆ. ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದರು.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಮನ್ಸುಖ್ ಮಾಂಡವೀಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಕೈಲಾಶ್ ಚೌದರಿ, ಭಗವಂತ ಖೂಬಾ, ಕೃಷಿ ಸಚಿವ ಬಿ.ಸಿ.ಪಾಟೀಲ್, ತೋಟಗಾರಿಕಾ ಸಚಿವ ಮುನಿರತ್ನ, ವಿವಿಧ ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರು, ಕೃಷಿ, ತೋಟಗಾರಿಕೆ ಮತ್ತು ರಸಗೊಬ್ಬರ ಸಚಿವಾಲಯದ ಅಧಿಕಾರಿಗಳು, ಎಲ್ಲಾ ರಾಜ್ಯಗಳ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಉನ್ನತ ಅಧಿಕಾರಿಗಳು ಇದ್ದರು.

ಇ-ನಾಮ್ ವಿಸ್ತರಣೆ: ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸುವ ಉದ್ದೇಶದಿಂದ ದೇಶಾದ್ಯಂತ ಇರುವ ಕೃಷಿ ಮಂಡಿಗಳನ್ನು ಒಂದೇ ವೇದಿಕೆಯಡಿ ತರುವ ಇ-ನಾಮ್ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲಾಗುವುದು ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ಇ-ನಾಮ್ ಯೋಜನೆಯಡಿ ಈಗಾಗಲೇ ದೇಶದ 1000 ಕೃಷಿ ಮಂಡಿಗಳನ್ನು ಜೋಡಿಸಲಾಗಿದೆ. ಅವುಗಳ ಮೂಲಕ ರೈತರು ತಮ್ಮ ಉತ್ಪನ್ನಗಳನ್ನು ದೇಶದ ಯಾವುದೇ ಭಾಗಕ್ಕೆ ಬೇಕಾದರೂ ಮಾರಾಟ ಮಾಡಬಹುದಾಗಿದೆ. ಶೀಘ್ರದಲ್ಲೇ ಇನ್ನಷ್ಟು ಕೃಷಿ ಮಂಡಿಗಳನ್ನು ಇದಕ್ಕೆ ಜೋಡಿಸಲಾಗುತ್ತದೆ ಎಂದರು.

15-07-2022 Vsv Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

15-07-2022 Hindu Pg 14

ability of the project. These joint statement, adding that To a question from *The* join in.

Production of vegetables to go up: Centre

Cultivation of spices, medicinal plants may dip

SPECIAL CORRESPONDENT
NEW DELHI

The total horticulture production in 2021-22 is estimated to be 341.63 million tonnes (MT), an increase of about 7.03 MT or 21% over the 2020-21 figure, according to the second advanced estimates of area and production of various horticultural crops released by the Union Agriculture Ministry here on Thursday.

Last year, the total horticulture cultivation was on 27.48 million hectares and according to the second advanced estimates, in 2021-22, it could be 27.74 million hectares.



Off to the market: Potatoes being harvested near Ghaziabad. ▪ R.V. MOORTHY

The Centre said that while there could be an increase in the production of fruits, vegetables and honey, the cultivation of spices, flowers, medicinal plants and plantation crops could decrease over previous year. "The fruit production is estimated at 107.1 MT compared to 102.48 MT in 2020-21. The production of vegetables is estimated to be 204.61 MT, compared to 200.45 MT in 2020-21," it said in a release.

In the case of onion, the production is estimated to be 31.7 MT against 26.64 MT in 2020-21. Potato production is likely to be 53.58 MT, from 56.17 MT in 2020-21. Tomato yield is expected to be 20.34 MT, from 21.18 MT in 2020-21. Farmers of the three crops had agitated against the drop in prices last year.

Farmers' organisations have also been complaining about scarcity of fertilizers and increase in its price.

Union Agriculture Minister Narendra Singh Tomar said in Bengaluru on Thursday that the country had to depend on the import of fertilizers and the Centre was incurring a subsidy of about ₹2.5 lakh crore annually so that the burden of rising prices globally did not fall on the farmers. "But there must be an end to this situation at some time," he said.

15-07-2022
Hd Pg 01

15-07-2022
Sk Pg 07

15-07-2022
Vk Pg 5B

ದೇವನಹಳ್ಳಿ ಬಳಿ ಘಟಕಕ್ಕೆ ಶಂಕುಸ್ಥಾಪನೆ

2 ವರ್ಷದಲ್ಲಿ ನ್ಯಾನೊ ಯೂರಿಯಾ ಘಟಕ



12 ಎಕರೆ ಮಂಜೂರು

ರಾಜ್ಯ ಸರ್ಕಾರ ಯೂರಿಯಾ ಘಟಕಕ್ಕೆ 12 ಎಕರೆ ಪ್ರದೇಶವನ್ನು ಮಂಜೂರು ಮಾಡಿದೆ. ಜತೆಗೆ ಇತರ ಮೂಲ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ. ೨

• ದಿಗಂತ ವರದಿ, ಬೆಂಗಳೂರು

ದಕ್ಷಿಣ ಭಾರತದಲ್ಲಿ ಮೊದಲ ನ್ಯಾನೊ ಯೂರಿಯಾ (ದ್ರವ) ಘಟಕ ಸ್ಥಾಪಿಸುವ ಕಾಮಗಾರಿಯನ್ನು 2 ವರ್ಷದಲ್ಲಿ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಸಗೊಬ್ಬರ ಸಚಿವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಗುರುವಾರ ದೇವನಹಳ್ಳಿ ತಾಲ್ಲೂಕು ನಾಗನಾಯಕನಹಳ್ಳಿ 2ನೇ ಹಂತದ ಹೈಟೆಕ್ ಡಿಫೆನ್ಸ್ ಹಾಗೂ ವೈಮಾನಿಕ ಪಾರ್ಕ್ ಪ್ರದೇಶದಲ್ಲಿ ಶಂಕುಸ್ಥಾಪನೆ ನೆರವೇರಿದ ಬಳಿಕ ಮಾತನಾಡಿದ ಅವರು, ಇಫ್ಕೋ ಸಂಸ್ಥೆಯಿಂದ ಮೊದಲ ಬಾರಿ ನ್ಯಾನೋ ಯೂರಿಯಾ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಕರ್ನಾಟಕ ಸಹಿತ ದಕ್ಷಿಣ ಭಾರತದ ರಾಜ್ಯಗಳಿಗೆ ಭವಿಷ್ಯದಲ್ಲಿ ನ್ಯಾನೋ ಯೂರಿಯಾ ಬೇಡಿಕೆಯಷ್ಟು ಪೂರೈಕೆಯಾಗುವ ನಿರೀಕ್ಷೆ ಇದೆ. ರೈತರಿಗೆ ಸುಲಭವಾಗಿ ಗೊಬ್ಬರ ಸಿಗುವಂತೆ ಕೇಂದ್ರ ಸರ್ಕಾರ ಈಗಾಗಲೇ ಹಲವು ಉಪಕ್ರಮಗಳನ್ನು ಕೈಗೊಂಡಿದ್ದು, ಹೊಸದಾಗಿ ಸ್ಥಾಪನೆಯಾಗಲಿರುವ ಘಟಕವು ಕಾಲಮಿತಿಯೊಳಗೆ ಪೂರ್ಣವಾಗಬೇಕು ಎಂದರು. ೨



ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ವಿವಿಧ ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಿದರು. ಕೇಂದ್ರ ಸಚಿವರಾದ ನರೇಂದ್ರಸಿಂಗ್ ತೋಮರ್, ಮನ್ಸುಖ್ ಮಾಂಡವೀಯ, ಭಗವಂತ ಖೂಬಾ, ಕೈಲಾಶ್ ಚೌಧರಿ, ಶೋಭಾ ಕರಂದ್ಲಾಜೆ, ಸಚಿವ ಬಿ.ಸಿ. ಪಾಟೀಲ್, ಮುನಿರತ್ನ ಸೇರಿದಂತೆ ಮತ್ತಿತರ ಗಣ್ಯರು ಇದ್ದರು.

'ಕೃಷಿಗೆ ದೊರೆಯದ ಯಶಸ್ಸು'

ಬೆಂಗಳೂರು: ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಕ್ಕೆ ಕೇಂದ್ರ ಹೆಚ್ಚಿನ ಒತ್ತು ಕೊಟ್ಟಿದ್ದು, ವಿವಿಧ ಯೋಜನೆಗಳ ಮೂಲಕ ಕೃಷಿ ವಲಯಕ್ಕೆ ಉತ್ತೇಜನ ನೀಡಲಾಗುವುದು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಹೇಳಿದರು.

ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ವಿವಿಧ ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ, ತೋಟಗಾರಿಕೆ ಇಲಾಖೆಗೆ ಎಷ್ಟೇ ಉತ್ತೇಜನ ನೀಡಿದರೂ ಕೂಡ ಪರಿಪೂರ್ಣ ಯಶಸ್ಸು ಸಿಕ್ಕಿಲ್ಲವೆಂದೇ ಹೇಳಬೇಕಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೃಷಿಕ್ಷೇತ್ರದಲ್ಲಿ ಸಾಕಷ್ಟು ಉತ್ತೇಜನ ದೊರೆತರೂ ನಿರೀಕ್ಷಿತ ಮಟ್ಟದಲ್ಲಿ ಸಾಫಲ್ಯತೆ ಸಿಕ್ಕಿಲ್ಲ. ಹೀಗಾಗಿ ಯಶಸ್ಸು ಉತ್ತೇಜನಕ್ಕೆ ಮುಂದೆ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಇನ್ನಷ್ಟು ಚರ್ಚೆ ಆಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ, ಕೇಂದ್ರ ಸರ್ಕಾರಗಳು ಪರಸ್ಪರ ಸಹಕಾರದ ಮೇರೆಗೆ ನಿರ್ಧಾರ ಕೈಗೊಳ್ಳಬೇಕು. ಯೋಜನೆ, ಅನುದಾನ ರೈತರಿಗೆ ತಲುಪುವಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಆಮದು ವ್ಯವಸ್ಥೆ ಅಧರಿಸಿ ಸಬ್ಸಿಡಿ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಸ್ವಾವಲಂಬನೆ ಸಾಧಿಸಬೇಕಿದೆ. ನ್ಯಾನೊ ಯೂರಿಯಾವನ್ನು ಉತ್ತೇಜಿಸಬೇಕಿದೆ. ಜೊತೆಗೆ ಆಮದು ಪ್ರಮಾಣವನ್ನು ನಿಯಂತ್ರಿಸಿದರೆ ಹಣ ಉಳಿತಾಯವಾಗಲಿದೆ.

ಆಹಾರ ಪದ್ಧತಿಯಲ್ಲಿ ಸಿರಿಧಾನ್ಯ ಕಡಿಮೆ ಆಗಿರುವುದರಿಂದ ಜನರಲ್ಲಿ ಆರೋಗ್ಯ ಸಮಸ್ಯೆ ಹೆಚ್ಚಾಗಲು ಕಾರಣವಾಗಿದೆ. ಸಿರಿಧಾನ್ಯಗಳ ಬಳಕೆ ಹೆಚ್ಚಳಕ್ಕೆ ಕ್ರಮವಹಿಸುವ ಮೂಲಕ ನೈಸರ್ಗಿಕ ಕೃಷಿ ಪದ್ಧತಿಗೆ ಉತ್ತೇಜನ ನೀಡಬೇಕಿದೆ. ಇನ್ನು, ಡಿಜಿಟಲ್ ಕೃಷಿ ವ್ಯವಸ್ಥೆಗೆ ಕೇಂದ್ರ ಒತ್ತುಕೊಟ್ಟಿದ್ದು, ಪಿಎಂ ಕಿಸಾನ್ ಯೋಜನೆ ಪ್ರತಿ ರೈತರನ್ನು ತಲುಪಬೇಕಿದೆ ಎಂದು ಸಚಿವ ನರೇಂದ್ರ ಸಿಂಗ್ ತೋಮರ್ ವಿವರಿಸಿದರು.

ಇದೇ ವೇಳೆ, ಮಾತನಾಡಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು, ಸಾಂಪ್ರದಾಯಿಕ, ಆಧುನಿಕ ವ್ಯವಸಾಯ ಸೇರಿದಂತೆ ರೈತರು ಒಟ್ಟಾರೆ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಬೇಕು. ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬೇಕು. ರೈತರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಈಗಾಗಲೇ ಯೋಜನೆಗಳನ್ನು ರೂಪಿಸಿದ್ದು, ರೈತರು ಕೃಷಿ, ತೋಟಗಾರಿಕೆಯೊಂದಿಗೆ ಉಪ ಕಸುಬುಗಳಿಗೂ ಆದ್ಯತೆ ನೀಡಬೇಕು ಎಂದು ಹೇಳಿದರು.

ಕೇಂದ್ರ ಸಚಿವರಾದ ಮನ್ಸುಖ್ ಮಾಂಡವೀಯ, ಭಗವಂತ ಖೂಬಾ, ಕೈಲಾಶ್ ಚೌಧರಿ, ಶೋಭಾ ಕರಂದ್ಲಾಜೆ, ಸಚಿವ ಬಿ.ಸಿ. ಪಾಟೀಲ್, ಮುನಿರತ್ನ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

ದಕ್ಷಿಣ ಭಾರತದ ಅತಿದೊಡ್ಡ ಘಟಕಕ್ಕೆ ಶಂಕು | ಕೇಂದ್ರ ಸಚಿವ ಡಾ.ಮನ್ಸುಖ್ ಮಾಂಡವಿಯ ಭಾಗಿ

ದೇವನಹಳ್ಳಿಯಲ್ಲಿ ನ್ಯಾನೋ ಯೂರಿಯಾ ಘಟಕ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದಕ್ಷಿಣ ಭಾರತದ ನ್ಯಾನೋ ಯೂರಿಯಾ (ದ್ರವ) ಉತ್ಪಾದನಾ ಘಟಕವನ್ನು ರಾಜ್ಯದ ದೇವನಹಳ್ಳಿಯಲ್ಲಿ ಆರಂಭಿಸಲಾಗುತ್ತಿದ್ದು, ವಾರ್ಷಿಕ 6 ಕೋಟಿ ಬಾಟಲ್ ಉತ್ಪಾದಿಸುವ ಗುರಿ ನಿಗದಿಪಡಿಸಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದ್ದಾರೆ.

ಇಫ್ಕೋ ಸಂಸ್ಥೆಯಿಂದ ನಿರ್ಮಿಸಲಾಗುತ್ತಿರುವ ನ್ಯಾನೋ ಯೂರಿಯಾ ಘಟಕಕ್ಕೆ ಗುರುವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಇಫ್ಕೋ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ನ್ಯಾನೋ ಯೂರಿಯಾ ಸಂಶೋಧಿಸಿ ಪೇಟೆಂಟ್ ಪಡೆದುಕೊಂಡಿದೆ. ಮೊದಲ ಹಂತದಲ್ಲಿ ಗುಜರಾತ್‌ನಲ್ಲಿ ಘಟಕ ಆರಂಭಿಸಲಾಗಿದ್ದು, ಭಾರತದಲ್ಲಿ ಈಗ ಅತಿ ದೊಡ್ಡ ನ್ಯಾನೋ ಯೂರಿಯಾ ಘಟಕ ಸ್ಥಾಪನೆ ಮಾಡಲಾಗುತ್ತಿದೆ. ವಾರ್ಷಿಕ 6 ಕೋಟಿ ಬಾಟಲಿಗಳನ್ನು ಉತ್ಪಾದನೆ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

350 ಕೋಟಿ ರೂಪಾಯಿ ವೆಚ್ಚ

ನ್ಯಾನೋ ಯೂರಿಯಾ ಸ್ಥಾವರವು ಅಂದಾಜು 350 ಕೋಟಿ ರೂ. ಯೋಜನೆಯಾಗಿದ್ದು, ಲಾಜಿಸ್ಟಿಕ್ ಮತ್ತು ಸ್ಟೋರೇಜ್ ಹೊಂದಿದೆ. ಸರ್ಕಾರದಿಂದ 12 ಎಕರೆ ಭೂಮಿ ಹಸ್ತಾಂತರ ಮಾಡಿದೆ. ಘಟಕ ನಿರ್ಮಾಣ ಕಾಮಗಾರಿ 15 ತಿಂಗಳಲ್ಲಿ ಪೂರ್ಣಗೊಳ್ಳಲಿದೆ.



ವಿಜಯವಾಣಿ ಚಿತ್ರ

ದೇವನಹಳ್ಳಿಯಲ್ಲಿ ನ್ಯಾನೋ ಯೂರಿಯಾ ಘಟಕದ ಶಂಕುಸ್ಥಾಪನೆ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಡಾ. ಮನ್ಸುಖ್ ಮಾಂಡವಿಯ, ಶೋಭಾ ಕರಂದ್ಲಾಜೆ, ಸಂಸದ ಬಚ್ಚೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಒಂದು ಚೀಲ (45 ಕೆ.ಜಿ.) ಯೂರಿಯಾ ಗೊಬ್ಬರದ ಬದಲಿಗೆ 500 ಎಂ.ಎಲ್. ನ್ಯಾನೋ ಯೂರಿಯಾ (ದ್ರವ) ವನ್ನು ಬೆಳೆಗಳಿಗೆ ರೈತರು ಸಿಂಪಡಣೆ ಮಾಡಬಹುದು. ವಾರ್ಷಿಕ 6 ಕೋಟಿ ನ್ಯಾನೋ ಯೂರಿಯಾ ಬಾಟಲಿ ಉತ್ಪಾದನೆಯಿಂದ 30 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಉತ್ಪಾದನೆ ತಗ್ಗಲಿದೆ ಎಂದರು.

ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ಸಂಸದ ಬಚ್ಚೇಗೌಡ, ಶಾಸಕ ನಾರಾಯಣ ಸ್ವಾಮಿ, ಇಫ್ಕೋ ಅಧ್ಯಕ್ಷ ದಿಲೀಪ್ ಸಂಘಾನಿ, ಉಪಾಧ್ಯಕ್ಷ ಬಿಲ್ವೆರ್ ಸಿಂಗ್ ಇದ್ದರು.

ಜಮೀನು ಬಿಡುಗಡೆಗೆ ಒತ್ತಾಯ

ನಾನೋ ಯೂರಿಯಾ ಪ್ಲಾಂಟ್‌ಗೆ ಕೆಐಡಿಬಿ ರೈತರ ಫಲವತ್ತಾದ 1700 ಎಕರೆ ಜಮೀನು ವಶಪಡಿಸಿಕೊಂಡಿದ್ದು, ತಕ್ಷಣ ಇದನ್ನು ಬಿಡುಗಡೆ ಮಾಡಿಸಬೇಕು ಎಂದು ರೈತರು ಸಿಎಂ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದರು. ನಾವು 102 ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದೇವೆ. ಇದಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಇದರಿಂದ ಸಣ್ಣ ಹಿಡುವಳಿದಾರರಿಗೆ ಸಮಸ್ಯೆ ಆಗಿದೆ. ಇದನ್ನು ಕೈ ಬಿಡಬೇಕು ಎಂದು ರೈತರು ಒತ್ತಾಯಿಸಿದರು